

# ಅತಿ ಎತ್ತರದ ತೂಗು ಸೇತುವೆ!



ಅಮೆರಿಕದ ಕೊಲೆರೆಡೊ ರಾಜ್ಯದ ಕ್ಯಾನನ್ ನಗರದ ಹತ್ತಿರದಲ್ಲಿರುವ ರಾಯಲ್ ಜಾರ್ಜ್ ಸೇತುವೆಯು ಪ್ರವಾಸಿಗರ ಅತ್ಯಂತ ಆಕರ್ಷಣೆಯ ಸ್ಥಳವೆನಿಸಿದೆ. ಸುಮಾರು 1053 ಅಡಿ ಎತ್ತರವಿರುವ ಈ ಸೇತುವೆಯನ್ನು 1929ರಲ್ಲಿ ನಿರ್ಮಿಸಲಾಯಿತು. ಇದು ವಿಶ್ವದ ಅತ್ಯಂತ ಅದ್ಭುತ ಸೇತುವೆಗಳಲ್ಲಿ ಒಂದಾಗಿದೆ.

ಈ ಸೇತುವೆಯು 1982ರವರೆಗೆ ಸ್ಥಿರಗೊಳಿಸುವ ಗಾಳಿ (ವಿಂಡ್) ಕೇಬಲ್‌ಗಳನ್ನು ಹೊಂದಿರಲಿಲ್ಲ. ಜಾರ್ಜ್ ಈ ಕೋಲ್ ಎನ್ನುವವರು ಈ ಸೇತುವೆಯ ವಿನ್ಯಾಸ ಮಾಡಿದರು ಮತ್ತು ಜಾರ್ಜ್ ಈ ಕೋಲ್ ಕನ್ಸಸ್ಟ್ರಕ್ಷನ್ ಕಂಪನಿಯು ಈ ಸೇತುವೆಯನ್ನು ನಿರ್ಮಿಸಿತು. ಕೇವಲ ಆರೇ ತಿಂಗಳಲ್ಲಿ ಇದನ್ನು ಸುಮಾರು 350,000 ಡಾಲರ್ (24,953,950 ರೂಪಾಯಿಗಳು) ವೆಚ್ಚದಲ್ಲಿ ನಿರ್ಮಿಸಲಾಯಿತು.

ಇದನ್ನು 1929ರ ಡಿಸೆಂಬರ್ 8 ರಂದು ಅನಾವರಣ ಮಾಡಲಾಯಿತು. ಸೇತುವೆಯ ಗೋಪುರಗಳ ಮುಖ್ಯ ವಿಸ್ತೀರ್ಣ 880 ಅಡಿ (268 ಮೀಟರ್),ಒಟ್ಟು ಉದ್ದ 1260 ಅಡಿ (384 ಮೀಟರ್),ಅಗಲ 18 ಅಡಿ (5.5 ಮೀಟರ್) ಮತ್ತು ಗೋಪುರಗಳು 150 ಅಡಿ (46 ಮೀಟರ್) ಗಳಷ್ಟು ಎತ್ತರವಾಗಿವೆ. ಸ್ಟೀಲ್ ಬೇಸ್ ರಚನೆಯು 1292 ಮರದ ಹಲಗೆಗಳಿಂದ ಆವೃತವಾಗಿದೆ. ಅರ್ಕಾನ್ಸಾಸ್ ನದಿಯಿಂದ 956 ಅಡಿ ಎತ್ತರಕ್ಕೆ ನೇತಾಡುತ್ತಿರುವ ಈ ಸೇತುವೆಯು ಅಮೆರಿಕದ ಅತಿ ಎತ್ತರದ ತೂಗು ಸೇತುವೆಯಾಗಿದೆ.

■ ವಿನಯಕುಮಾರ್ ಬಿ.ಹೆಚ್.